# ಕರ್ನಾಟಕ ಸರ್ಕಾರ

**ವಿಷಯ:** ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ತಾಲ್ಲೂಕು ಕೊಪ್ಪ ಅರಣ್ಯ ಪ್ರದೇಶದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಸಂಶಿಯಿಂದ ಕಳಸದವರೆಗೆ M/s JIO DIGITAL FIBER PVT LTD. ಇವರು DIGITAL OPTICAL CABLE FIBER ಅಳವಡಿಸಲು 0.1232 ಹೆ. ಅರಣ್ಯ ಪ್ರದೇಶದ ಅರಣ್ಯ ತಿರುವಳಿ ಅನುಮತಿ ನೀಡುವ ಬಗ್ಗೆ.
**(Proposal No: FP/KA/OFC/153126/2022)**

**ಓದಲಾಗಿದೆ:**
(1) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರ ಕಚೇರಿಯ ಪತ್ರ ಸಂಖ್ಯೆ: KFD/HoFF/A5-4 (GFL)/11/2022-FC, ದಿನಾಂಕ: 21.05.2025.
(2) Consolidated Guidelines and Clarifications issued under Van (Sanrakshan Evam Samvardhan) Adhinyam, 1980 and Rules 2023.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ತಾಲ್ಲೂಕು ಕೊಪ್ಪ ಅರಣ್ಯ ಪ್ರದೇಶದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಸಂಶಿಯಿಂದ ಕಳಸದವರೆಗೆ M/s JIO DIGITAL FIBER PVT LTD. ಇವರು DIGITAL OPTICAL CABLE FIBER ಅಳವಡಿಸಲು 0.1232 ಹೆ. ಅರಣ್ಯ ಪ್ರದೇಶದ ಅರಣ್ಯ ತಿರುವಳಿ ಅನುಮತಿ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಕಳುಹಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ವನ (ಸಂರಕ್ಷಣ ಏವಂ ಸಂವರ್ದನ) ಅಧಿನಿಯಮ, 1980 ಮತ್ತು ವನ (ಸಂರಕ್ಷಣ ಏವಂ ಸಂವರ್ದನ) ನಿಯಮ, 2023ರ ಮಾರ್ಗಸೂಚಿಯ Chapter 4ರ ಪ್ಯಾರ 4.2 OFC Cable, ಕುಡಿಯುವ ನೀರಿನ ಕೊಳವೆ, ದೂರವಾಣಿ ತಂತಿ, ವಿದ್ಯುತ್ ಕೇಬಲ್, CNG/PNG, Slurry Pipelines ಹಾಗೂ Petroleum ಮತ್ತು Crude Oil Pipeline ಗಳನ್ನು ಹಾಲಿ ರಸ್ತೆಯ ಬದಿಯಲ್ಲಿ (ROW) ಅಳವಡಿಸಲು ಸಾಮಾನ್ಯ ಅನುಮೋದನೆಯನ್ನು ನೀಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಪ್ರಸ್ತಾವನೆಗೆ ವನ (ಸಂರಕ್ಷಣ ಏವಂ ಸಂವರ್ದನ) ಅಧಿನಿಯಮ, 1980 ಹಾಗೂ ವನ (ಸಂರಕ್ಷಣ ಏವಂ ಸಂವರ್ದನ) ನಿಯಮ, 2023 ರಡಿಯ ಮಾರ್ಗಸೂಚಿಯಲ್ಲಿ ಕಲ್ಪಿಸಲಾಗಿರುವ ಅವಕಾಶದ ಹಿನ್ನಲೆಯಲ್ಲಿ ಈ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಅದರಂತೆ, ಈ ಕೆಳಗಿನ ಆದೇಶ,

**ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 128 ಎಫ್‌ಎಲ್‌ಎಲ್ 2025,**
**ದಿನಾಂಕ:18.11.2025**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ತಾಲ್ಲೂಕು ಕೊಪ್ಪ ಅರಣ್ಯ ಪ್ರದೇಶದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಸಂಶಿಯಿಂದ ಕಳಸದವರೆಗೆ M/s JIO DIGITAL FIBER PVT LTD, ಇವರು DIGITAL

OPTICAL CABLE FIBER ಅಳವಡಿಸಲು 0.1232 ಹೆ. ಅರಣ್ಯ ಪ್ರದೇಶದ ಅರಣ್ಯ ತಿರುವಳಿ ಪ್ರಸ್ತಾವನೆಗೆ ವನ (ಸಂರಕ್ಷಣ ಏವಂ ಸಂವರ್ದನ) ಅಧಿನಿಯಮ, 1980 ಮತ್ತು ವನ (ಸಂರಕ್ಷಣ ಏವಂ ಸಂವರ್ದನ) ನಿಯಮ, 2023ರ ಮಾರ್ಗಸೂಚಿಯ Chapter 4ರ ಪ್ಯಾರ 4.2ರಲ್ಲಿನ ನಿಬಂಧನೆಗಳನ್ನು ಅನುಪಾಲನೆ ಮಾಡುವ ಷರತ್ತಿಗೊಳಪಟ್ಟು, 4.2ರನ್ವಯ ಪ್ರದತ್ತವಾದ ಅಧಿಕಾರ ಚಲಾಯಿಸಿ ಅನುಮತಿ ನೀಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಗೋಪಾಲ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.
(ಅರಣ್ಯ-ಸಿ ಮತ್ತು ಸಮನ್ವಯ)

**ಪ್ರತಿಯನ್ನು;**

1. Secretary to Government of India, Ministry of Environment, forest and climate change, Indira Pariyavaran Bhavan, Jorbhag Road, Aliganj, New Delhi-110003.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು- ಇವರಿಗೆ ಮಾಹಿತಿಗಾಗಿ
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರಿಗೆ ಮಾಹಿತಿಗಾಗಿ
4. Deputy General Manager, Jio Digital Fibre Private limited, No.51, RMZ Icon, Palace Cross Road, Vasanth Nagar, Bengaluru.
5. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿ